# ನೀರವ ರಾತ್ರಿಯ ಮಾಯಾಲೋಕ

**Que 1: ರೇಡಿಯಂನ ಸಂಶೋಧನೆಯ ಸಂದರ್ಭದಲ್ಲಿ ಪಿಯರ್ ದಂಪತಿಗಳಿಗೆ ಎದುರಾದ ತೊಡಕುಗಳು ಯಾವುವು? ಅವುಗಳನ್ನು ನಿಭಾಯಿಸಿ ಯಶಸ್ವಿಯಾದ ಬಗೆಯನ್ನು ವಿವರಿಸಿರಿ** ***Marks :(8)***

**Ans:** ಪಾಳು ಬಿದ್ದ ಮುರುಕಲು ಕೊಟ್ಟಿಗೆಯೇ ಪ್ರಯೋಗಾಲಯ - ಮುಗಿಲಿಗೆ ಬಾಯ್ಬಿಟ್ಟ ಸೂರು ಧೂಳು ತುಂಬಿದ ಪರಿಸರ - ಪರಿಮಿತ ಸೌಕರ್ಯ - ರೇಡಿಯಂನ ಸಂಶೋಧನೆಯಲ್ಲಿ ಮೇರಿಕ್ಯೂರಿಯ ಸತತ ಪ್ರಯತ್ನ -ಆರ್ಥಿಕ ಮುಗ್ಗಟ್ಟು ಆರೋಗ್ಯ ಸಮಸ್ಯೆಗಳು, ಕಷ್ಟಗಳನ್ನು ಮೆಟ್ಟಿ ನಿಂತ ಬಗೆ - ಸಂಶೋಧನೆಯಲ್ಲಿ ಯಶಸ್ವಿಯಾದುದು .

**Que 2: 'ಸತತ ಪ್ರಯತ್ನಗಳಿಂದ ಮಾತ್ರ ಉನ್ನತ ಯಶಸ್ಸು ಸಾಧ್ಯ' ಈ ಹೇಳಿಕೆಯನ್ನು 'ನೀರವ ರಾತ್ರಿಯ ಮಾಯಾಲೋಕ' ಪಾಠದ ಆಧಾರದಲ್ಲಿ ಸಮರ್ಥಿಸಿ ಬರೆಯಿರಿ.** ***Marks :(5)***

**Ans:** ರೇಡಿಯಂನ ಸಂಶೋಧನೆಯಲ್ಲಿ ಮೇರಿಕ್ಯೂರಿಯ ಸತತ ಪ್ರಯತ್ನ - ಸಮಸ್ಯೆಗಳನ್ನು ಮೆಟ್ಟಿ ನಿಂತ ಬಗೆ - ಸಂಶೋಧನೆಯಲ್ಲಿ ಯಶಸ್ವಿಯಾದುದು .

**Que 3: ಕೆಳಗೆ ನೀಡಲಾದ ಆತ್ಮಕಥೆಯ ಭಾಗವನ್ನು ಜೀವನ ಚರಿತ್ರೆಯಾಗಿ ಪರಿವರ್ತಿಸಿ ಬರೆಯಿರಿ.**

**ತಂದೆ ,ತಾಯಿ ಇಬ್ಬರೂ ಕೆಲಸಕ್ಕೆ ಹೋದಾಗ ನಾನೊಬ್ಬನೇ ನಮ್ಮ ಮನೆ ಕಾಯುತ್ತಿದ್ದೆ.ಸಂಜೆ ಆದ ಕೂಡಲೇ ನಮ್ಮ ಮನೆಯ ಕೋಳಿಗಳನ್ನು ಹುಡುಕಿ ಕವುಚುತ್ತಿದ್ದೆ. ಪುಟ್ಟದಾದ ಸೀಮೆ ಎಣ್ಣೆ ಬುಡ್ಡಿ ಹಚ್ಚಿ ಬಿಡುತ್ತಿದ್ದೆ. ತಂದೆ ,ತಾಯಿ ಬಂದವರೇ ಅಡುಗೆಗೆ ಸಿದ್ದತೆ ಮಾಡುತ್ತಿದ್ದರು. ಕೆಲವು ದಿನ ಗೆಣಸನ್ನು ಬೇಯಿಸಿ ತಿನ್ನುತ್ತಿದ್ದೆವು. ಕೆಲವು ದಿನ ಕಡಲೆಪುರಿಯನ್ನು ತಿಂದು ನೀರು ಕುಡಿದು ಮಲಗುತ್ತಿದ್ದೆವು. ಚೂರು ಹೊಲದಲ್ಲಿ ಬೆಳದದ್ದು ನನ್ನ ತಂದೆಯ ಸಾಲದ ಬಡ್ಡಿಗೆ ಸಾಕಾಗುತ್ತಿತ್ತು. ಕೂಲಿಯ ಹಣ ಕುಟುಂಬದ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ನನ್ನ ತಾಯಿ ಸಾವನ ದುರ್ಗಕ್ಕೆ ಕಾಡಿನ ಸೌದೆ ತರಲು ಹೋಗುತ್ತಿದ್ದಳು.ಸಂತೆಯಲ್ಲಿ ಆ ಸೌದೆ ಹೊರೆ ಮಾರಾಟವಾಗುತ್ತಿತ್ತು. ಮನೆಗೆ ಬಂದು ಹೊರೆಯೊಳಗೆ ತುಂಬಿಸಿದ್ದ ಕಬ್ಬಿನ ಜಲ್ಲೆಯನ್ನು ತೆಗೆದು ನನಗೆ ಕೊಡುತ್ತಿದ್ದಳು.** ***Marks :(5)***

**Ans:** ಜೀವನ ಚರಿತ್ರೆಯಾಗಿ ಪರಿವರ್ತಿಸಿದ ಬರಹ.

**Que 4: ಮೇರಿಕ್ಯೂರಿಯ ಸಾಧನೆಗಳ ಕುರಿತು ಕಿರು ಟಿಪ್ಪಣಿ ತಯಾರಿಸಿರಿ** ***Marks :(4)***

**Ans:** ರೇಡಿಯಂನ ಸಂಶೋಧನೆಯಲ್ಲಿ ಮೇರಿಕ್ಯೂರಿಯ ಸತತ ಪ್ರಯತ್ನ - ಸಮಸ್ಯೆಗಳನ್ನು ಮೆಟ್ಟಿ ನಿಂತ ಬಗೆ - ಸಂಶೋಧನೆಯಲ್ಲಿ ಯಶಸ್ವಿಯಾದುದು .

**Que 5: ರೇಡಿಯಂನ ಸಂಶೋಧನೆಗಾಗಿ ಮೇರಿ ಮತ್ತು ಪಿಯರಿಗೆ ಲಭಿಸಿದ ಪ್ರಯೋಗಾಲಯದ ಸ್ಥಿತಿ ಹೇಗಿತ್ತು? ವಿವರಿಸಿರಿ.** ***Marks :(4)***

**Ans:** ಪಾಳು ಬಿದ್ದ ಮುರುಕಲು ಕೊಟ್ಟಿಗೆ - ಮುಗಿಲಿಗೆ ಬಾಯ್ಬಿಟ್ಟ ಸೂರು ಧೂಳು ತುಂಬಿದ ಪರಿಸರ - ಪರಿಮಿತ ಸೌಕರ್ಯ ಇತ್ಯಾದಿ